


ಗುರು ನಮನ ಧ್ವನಿಸಾಂದ್ರಿಕೆ

## ಸಾಧನೆ-ಮನ್ನಣೆ

ಮಂತ್ರಾಲಯದ ಸತ್ಯಾರ್ಥತೀರ್ಥರು ಕೊಡಮಾಡುವ ಬಾಲಗಂಧರ್ವ ಪ್ರಶಸ್ತಿ, ಗದಗದ ಕಲಾವಿಕಾಸ ಪರಿಷತ್ ನೀಡುವ 'ಪಂ. ಭೀಮಸೇನ ಗುರು–ಶಿಷ್ಯ ಪರಂಪರಾ' ಪ್ರಶಸ್ತಿ, ಕೋಲ್ಕತ್ತದ ಭಾಂಗೀಯ ಸಂಗೀತ ಪರಿಷತ್‌ನಿಂದ 'ಸಂಗೀತ ಕಲಾರತ್ನ' ಪ್ರಶಸ್ತಿ, ಕೇಂದ್ರ ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸಂಗೀತ ಸ್ಕಾಲರ್‌ಶಿಪ್‌ಗಳು ಇವರ ಸಾಧನೆಗೆ ಸಂದಿವೆ.

ಶಿಖರಕ್ಕೇರಿದವರು. ಹಿಂದಿ, ಕನ್ನಡ, ಮರಾಠಿ ದೇವರನಾಮಗಳನ್ನು ಲೀಲಾಜಾಲವಾಗಿ ಪ್ರಸ್ತುತಪಡಿಸುವ ಗಾಯಕ ಎನಿಸಿಕೊಂಡವರು. ಬಿ.ವಿ. ಕಾರಂತ ನಿರ್ದೇಶನದ ಹಿಂದಿಯ 'ಕೊಟ್ಟ' ಸಾಕ್ಷ್ಯಚಿತ್ರದಲ್ಲಿ ಹಿನ್ನೆಲೆ ಗಾಯನ ಕೀರ್ತಿ ಅವರದೇ. ಕನ್ನಡ ಟೀವಿ ಧಾರಾವಾಹಿ 'ವಚನ ವೈಭವ' ಸೇರಿದಂತೆ ಅನೇಕ ಧಾರಾವಾಹಿಗಳಲ್ಲಿ ಹಿನ್ನೆಲೆ ಗಾಯಕರಾಗಿ ಪ್ರಸಿದ್ಧರಾಗಿದ್ದಾರೆ. ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ 'ಮಂದ್ರ' ಕಾದಂಬರಿ ಆಧಾರಿತ ನಾಟಕದಲ್ಲಿ ಹಿನ್ನೆಲೆ ಗಾಯನವೂ ಕೀರ್ತಿ ಅವರದೇ. ತಮ್ಮ ನಾದ ಪ್ರತಿಭೆಯನ್ನು ಮಕ್ಕಳಿಗೂ ತಿಳಿಸಿ ಅವರಿಗೆ ಸಂಗೀತ ಕಲಿಸುವ ಸಲುವಾಗಿ ಕೀರ್ತಿ 'ಸುರ್ ನಮನ್' ಎಂಬ ಸಂಗೀತ ಸಂಸ್ಥೆ ಕಟ್ಟಿದ್ದಾರೆ.

'ನನ್ನ ಗುರುವಿನ ಮೇಲೆ ಬಂದೀಶ್ ರಚಿಸಬೇಕು ಎಂಬ ಯೋಚನೆ ಮನಸ್ಸಿಗೆ ಬಂತು. ಗುರು ತನ್ನ ವಿದ್ಯೆಯನ್ನೆಲ್ಲ ನಮಗೆ ಧಾರೆಯೆರೆದು ನಮಗೂ ಸಂಗೀತದಲ್ಲಿ ಒಂದು ಸ್ವತಂತ್ರ ವ್ಯಕ್ತಿತ್ವ ಬರುವಂತೆ ನೋಡಿಕೊಳ್ಳುವವರು. ಸಂಗೀತದ ಸರಿಗಮಪದಿಂದ ಹಿಡಿದು ರಾಗಾಲಾಪ, ಸ್ವರ ತಾನ್‌ಗಳು, ಮನೋಧರ್ಮ ಸಂಗೀತ... ಹೀಗೆ ಸಂಗೀತದ ಎಲ್ಲ ಆಯಾಮಗಳನ್ನು ತಾಳ್ಮೆಯಿಂದ ಹೇಳಿಕೊಟ್ಟು ಸಂಗೀತ ಪ್ರಪಂಚದಲ್ಲಿ ಕೇಳುಗರು ನಮ್ಮನ್ನು ಗುರುತಿಸುವಂತೆ ಮಾಡುವುದು ಸಾಮಾನ್ಯ ಕೆಲಸವಲ್ಲ. ಗುರುವಿಗೆ ಪ್ರತಿಯಾಗಿ ನಾವು ನೀಡುವುದು ಬರೀ ಗೌರವ ಸಮರ್ಪಣೆ ಅಷ್ಟೇ. ಗುರುವಿನ ಮೇಲಿರುವ ಪ್ರೀತಿ ಸದಾ ಕಾಲ ಹಾಗೂ ಮುಂದೆಯೂ ಮಕ್ಕಳಿಗೆ ಸಿಗುವಂತಾಗಲಿ ಎಂಬ ಮಹತ್ತರ ಉದ್ದೇಶದಿಂದ ಈ ಬಂದೀಶ್‌ಗಳನ್ನು ರಚಿಸಿ, ರಾಗ ಸಂಯೋಜಿಸಿ ಹಾಡಿ ಒಂದು ದಾಖಲೆಯಂತಿರಲಿ ಎಂದು ಸೀಡಿ ಹೊರತಂದೆ. ಇದು ಮುಂದೆ ಮಕ್ಕಳಿಗೂ ಸ್ಫೂರ್ತಿಯಾಗಲಿದೆ ಎಂಬ ಆಶಾಭಾವನೆ ನನ್ನದು' ಎನ್ನುತ್ತಾರೆ ಕೀರ್ತಿಕುಮಾರ್ ಬಡಶೇಷಿ.




### ನಿರೂಪಣೆ ಚೆನ್ನಾಗಿದೆ

ಹನ್ನೊಂದು ಕಂತುಗಳ ಧಾರಾವಾಹಿ (ಬನವಾಸಿ ವೆಂಕಟೇಶ ದೀಕ್ಷಿತ್) 'ನಕ್ಷತ್ರ ನುಂಗುವ ಸಮಯ' ನಿರೂಪಣೆ ಚೆನ್ನಾಗಿತ್ತು. ನಟ–ನಟಿಯರ ಕಥೆ ಅಷ್ಟೇ ಅಂದುಕೊಳ್ಳುತ್ತಿದ್ದಂತೆ ತಿರುವು ಪಡೆಯುತ್ತ ಸಂಪರ್ಕಕ್ಕೆ ಬಂದವರನ್ನೆಲ್ಲಾ ಒರೆಗೆ ಹಚ್ಚುತ್ತಾ ಹಣದಾಸೆಯ ಉದ್ಯಮ ಜಗತ್ತಿನಲ್ಲಿ ಮುಖವಾಡವೊಂದು ಕಳಚಿ ದಿಗ್ಭ್ರಮೆ ಹುಟ್ಟಿಸಿತು. ನಕ್ಷತ್ರ ನುಂಗಲು ನೋಡುವವನು ಬಿಕಾನೇರಿ. ಆದರೆ ಅವನೇ ವಿಧಿಯಿಂದ ನುಂಗಲ್ಪಟ್ಟ.

—ರಾಘವೇಂದ್ರ ಕುಲಕರ್ಣಿ, ಬೆಂಗಳೂರು,

### ವಿಭಿನ್ನ ಕಾದಂಬರಿ

ಇದೊಂದು ವಿಭಿನ್ನ ಕಾದಂಬರಿ. ಚಂದನಿಕಾ, ಆನಂದ, ದೇಶ್ವಂತರು ಬೇರೆ ಬೇರೆ ಜಗತ್ತಿಗೆ ಸೇರಿದವರು. ಆದರೆ ಸಂದರ್ಭ ಎಲ್ಲರನ್ನು ಒಗ್ಗೂಡಿಸಿ ಒರೆಗಲ್ಲಿಗೆ ಹಚ್ಚುತ್ತದೆ ದೈತ್ಯ ಉದ್ಯಮ ಜಗತ್ತು, ಆಸೆಬುರುಕ ಗ್ಲಾಮರ್ ಜಗತ್ತು. ಆದರೆ, ಆನಂದ ಚಂದನಿಕಾರ ಕತೆ ಮುಗಿಯಲಿಲ್ಲ. ಇನ್ನೂ ಇದೆ ಅನಿಸಿತು. ಲೇಖಕರು ಅದನ್ನು ಖಂಡಿತ ಬರೆಯಲಿ.

— ಕೆ. ವಾಸುದೇವರಾವ್, ಬೆಂಗಳೂರು

### ನವೀನ ಶೈಲಿ

ಟೀವಿ ಧಾರಾವಾಹಿಯಂತೆ ಸುಕಾಸುಮ್ಮನೆ ಎಳೆಯಲಿಲ್ಲ. ಮನಸೆಳೆಯಲು ಮಸಾಲೆ ಹಾಕಿ ಮರ್ಯಾದೆಯ ಎಲ್ಲೆ ದಾಟಲಿಲ್ಲ. ಖಳನಾಯಕಿಯನ್ನು ವೈಭವೀಕರಿಸಿ ನಾತ ಬರಿಸಲಿಲ್ಲ. ಮೊದಲ ಕನ್ನಡ ಸಾಮ್ರಾಜ್ಯದ ಪುರಾತನ ಭವನ, ಅಲ್ಲಿ ವಾಸಿಸುವ ಸಜ್ಜನರು ಅಲ್ಲಿ ಸೇರುವ ನಟಿ, ಪ್ರೇಮಾಂಕುರ, ಸುಂದರ ಕನಸು. ಆಗೊಬ್ಬ ನಕ್ಷತ್ರ ನುಂಗುವ 'ಕೆಂಪು ದೈತ್ಯ'! ಪುರಾತನ ಭವನವನ್ನೇ ನುಂಗ ಬಯಸುವವ. ಸಂತೋಷಪಟ್ಟೆವು.

— ರುಕ್ಮಿಣಿ ಸಂಪತ್, ಬೆಂಗಳೂರು

### ಹೋಗಿ ನೋಡುವ ಮನಸ್ಸಾಗಿದೆ

ಮಧುಕೇಶ್ವರ ದೇವಸ್ಥಾನವನ್ನು ನಾವು ಮನೆಯವರೆಲ್ಲ ನೋಡಿ ಬಂದಿದ್ದೆವು. ಹಳೆಯ ಮತ್ತು ಮೊದಲ ಕನ್ನಡ ಸಾಮ್ರಾಜ್ಯದ ಇಷ್ಟೆಲ್ಲಾ ವಿವರ ತಿಳಿದು ಮತ್ತೊಮ್ಮೆ ಹೋಗಿ ನೋಡುವ ಮನಸ್ಸಾಗಿದೆ.

—ಬಿ. ರಾಧಾಮಣಿ, ಬೆಂಗಳೂರು

### ಅಂತ್ಯ ಕುತೂಹಲಕಾರಿ

ಕದಂಬರಾಳಿದ ನಾಡಿನ, ನಿಸರ್ಗದ ಮಡಿಲಲ್ಲಿರುವ ಒಂದು ಪುರಾತನ ಮನೆ ಮತ್ತು ಅಲ್ಲಿನ ನಿವಾಸಿಗಳನ್ನೇ ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ಯಾವ ಘರ್ಷಣೆಗಳಿಲ್ಲದೆ ಸುಂದರ ಸಾಹಿತ್ಯದಲ್ಲಿ ಹೆಣೆಯಲಾಗಿರುವ ಈ ಕಥೆ ತುಂಬಾ ಚೆನ್ನಾಗಿದೆ. ಅಂತ್ಯ ಕುತೂಹಲಕಾರಿ.

—ರಘೋತ್ತಮ್ ಟಿ.ವಿ., ಮೈಸೂರು

### ಗಮನಸೆಳೆದ ಆನಂದನ ಪಾತ್ರ

ಪ್ರಕೃತಿ ವರ್ಣನೆ, ಪ್ರಾಚೀನ ಪರಂಪರೆಯ ಭವ್ಯವಾದ ಐತಿಹಾಸಿಕ ಮನೆ ವರ್ಣನೆ, ಸಂಭಾಷಣೆ ಎಲ್ಲವೂ ಹಿತಮಿತವಾಗಿತ್ತು. ಪ್ರಾಚೀನ ಭವ್ಯ ಪರಂಪರೆಯ ಮನೆಯನ್ನು ಅಣ್ಣತಮ್ಮಂದಿರು ಹಣ ದಾಹದಿಂದ ಬೇರೊಬ್ಬರಿಗೆ ಮಾರುವುದನ್ನು ಯಾರ ಮೇಲೂ ಹೊರಿಸದೆ ವಿಧಿಯಾಟದಂತೆ ನಡೆದಿರುವುದು ಸೂಕ್ತವಾಗಿದೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ